# ಶ್ರೇಷ್ಠ ಸಾಧಕ -ಸಾಧಕಿಯರು

ಸ್ವಾಮಿ ಶಾಂತಿವ್ರತಾನಂದ

ನಮ್ಮ ನಡುವೆ ಅಸಾಧಾರಣ ರೀತಿಯ ಸಾಧನೆಯನ್ನು ಮಾಡಿದ ಯುವಕ, ಯುವತಿಯರಿದ್ದಾರೆ. ಆದರೆ ಅನೇಕರಿಗೆ ಅವರ ಸಾಧನೆಯ ಹಿಂದಿರುವ ಅವಿರತ ಶ್ರಮ, ಛಲ, ಹಾಗೂ ಆತ್ಮವಿಶ್ವಾಸ ಮುಂತಾದ ಗುಣಗಳ ಪರಿಚಯವಿಲ್ಲ. ಇಂದಿನ ಯುವಜನತೆಗೆ ಸ್ಫೂರ್ತಿ ನೀಡಬಲ್ಲ ಕೆಲವು ಮಂದಿ ಸಾಧಕರ ಇಂತಹ ಗುಣಗಳ ಬಗ್ಗೆ ವಿವರಿಸಿರುವ ಲೇಖಕರು ಉತ್ತಮ ವಾಗ್ಮಿಗಳು ಮತ್ತು ಲೇಖಕರು; ಪ್ರಸ್ತುತ ಅವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು 'ವಿವೇಕಪ್ರಭ' ದಲ್ಲಿ ಅನೇಕ ಸ್ಫೂರ್ತಿದಾಯಕ ಲೇಖನಗಳನ್ನು ಬರೆದಿದ್ದಾರೆ.

''ಜಗತ್ತಿನ ಇತಿಹಾಸವೆಂದರೆ ತಮ್ಮಲ್ಲಿ ತಮಗೆ ಶ್ರದ್ಧೆಯಿದ್ದ ಕೆಲವೇ ವ್ಯಕ್ತಿಗಳ ಇತಿಹಾಸ! ವ್ಯಕ್ತಿಯಲ್ಲಿ ಸುಪ್ತವಾಗಿರುವ ದಿವ್ಯತೆಯನ್ನು ಈ ಶ್ರದ್ಧೆ ವ್ಯಕ್ತಗೊಳಿಸುತ್ತದೆ. ನೀವು ಶ್ರದ್ಧಾವಂತರಾದಾಗ ಏನನ್ನು ಬೇಕಾದರೂ ಸಾಧಿಸುತ್ತೀರಿ. ನಿಮ್ಮೊಳಗಿನ ಅನಂತವಾದ ಶ್ರದ್ಧಾಬಲವನ್ನು ಬಡಿದೆಬ್ಬಿಸದಿದ್ದಾಗ ಮಾತ್ರ ಅದು ವಿಫಲರಾಗುವುದು. ಯಾವುದೇ ವ್ಯಕ್ತಿ ಅಥವಾ ದೇಶ ಶ್ರದ್ಧೆಯನ್ನು ಕಳೆದುಕೊಂಡಲ್ಲಿ ಅದು ಮೃತ್ಯುಗೀಡಾದಂತೆಯೇ'' ಎನ್ನುತ್ತಾರೆ ಸ್ವಾಮಿ ವಿವೇಕಾನಂದರು.

'ಶ್ರದ್ಧೆಯಿದ್ದರೆ ಗೆದ್ದೆ; ಇಲ್ಲವೆಂದರೆ ಬಿದ್ದೆ!' ಎಂದು ಸ್ವಾಮೀಜಿಯವರ ಮಾತುಗಳಿಂದ ನಮಗೆ ತಿಳಿದುಬರುತ್ತದೆ. ಇಂತಹ ವಿದ್ಯುತ್ ವಾಣಿಗಳನ್ನು ಆಲಿಸಿದಾಗ, ಕೊಂಚ ಸಮಯ ನಾವು ಪ್ರೇರೇಪಿತರಾಗುತ್ತೇವೆ, ಉತ್ಸಾಹಭರಿತರಾಗುತ್ತೇವೆ. ಮತ್ತೆ ಅದೇ ಹಿಂದಿನ ಸ್ಥಿತಿ. ಆದರೆ ಕೆಲವೇ ಕೆಲವು ಶ್ರದ್ಧಾವಂತ ವ್ಯಕ್ತಿಗಳು ತಮ್ಮ ಗುರಿಯನ್ನು ಸಾಧಿಸುವವರೆಗೂ, ಕನಸು ನನಸಾಗುವವರೆಗೂ, ಬಿಡದೆ ಕಾರ್ಯಪ್ರವೃತ್ತರಾಗುತ್ತಾರೆ; ಶ್ರಮಿಸುತ್ತಾರೆ, ಯಶಸ್ಸಿನ ಫಲವನ್ನು ಸವಿಯುತ್ತಾರೆ. ಹಾಗೆಂದ ಮಾತ್ರಕ್ಕೆ ಅವರ ಮಾರ್ಗ ವೇನೂ ಸುಗಮವಾಗಿರುವುದಿಲ್ಲ. ಎಲ್ಲಾ ಅನುಕೂಲತೆಗಳು ಅವ ರಿಗೆ ಲಭ್ಯವಿರುವುದಿಲ್ಲ. ಆದರೆ ಅವರ ಛಲ, ನಿರಂತರ ಪ್ರಯತ್ನ, ಶ್ರಮ, ಎದೆಗಾರಿಕೆ, ಶ್ರದ್ಧೆ, ಸಾಹಸ ಪ್ರವೃತ್ತಿಗಳು ಅವರನ್ನು ಶ್ರೇಷ್ಠ ವ್ಯಕ್ತಿಗಳನ್ನಾಗಿ ಮಾಡುತ್ತವೆ.

### ''ನಿಮ್ಮಂತೆ ನನ್ನನ್ನು ಕಾಣಿ''

ಕೆಲವು ವರ್ಷಗಳ ಹಿಂದೆ ಲಂಡನ್ನಿನ ಬಕಿಂಗ್‌ಹ್ಯಾಮ್ ಪ್ಯಾಲೇಸ್‌ನಲ್ಲಿ ಬ್ರಿಟನ್ನಿನ ರಾಣಿ ಕಾರ್ಯಕ್ರಮವೊಂದನ್ನು ಆಯೋಜಿಸಿದ್ದರು. ಆ ಕಾರ್ಯಕ್ರಮದಲ್ಲಿ ಯುವತಿ ಅಶ್ವಿನಿ ಅಂಗಡಿ ವಿಶೇಷ ಆಹ್ವಾನಿತರಾಗಿ ಪಾಲ್ಗೊಂಡಿದ್ದರು. ಅಲ್ಲಿಂದ ನಮಗೆ ಅವಳನ್ನು ಕುರಿತು ತಿಳಿದುಬಂತು.

ಅಶ್ವಿನಿ ಅಂಗಡಿಯು ಕರ್ನಾಟಕದ ಕುವರಿ ಎಂದು ತಿಳಿದು ನಮ್ಮ ಜನರು ಆಶ್ಚರ್ಯ-ಆನಂದ ಚಕಿತರಾದರು. ಅಶ್ವಿನಿ ಅಂಗಡಿಗೆ ಹುಟ್ಟಿನಿಂದಲೂ ನೇತ್ರಶಕ್ತಿಯಿಲ್ಲ. ಆದ್ದರಿಂದ ಅವರ ನೆಂಟರಿಷ್ಟರು ಅಶ್ವಿನಿಯ ತಾಯಿಗೆ ಆ ಮಗುವನ್ನು ತ್ಯಜಿಸಲು ಹೇಳಿದರು. ಆದರೆ ತಾಯಿಗೆ ತನ್ನ ಮಗು ಎಂದಾದರೂ ಭಾರವೇ? ತಾಯಿ ಅದಕ್ಕೊಪ್ಪದೆ ಮಗುವನ್ನು ಸಲಹಿದಳು. ಅಶ್ವಿನಿ ತನ್ನ ವಿದ್ಯಾಭ್ಯಾಸವನ್ನು ಮುಗಿಸಿ, ಕ್ಯಾಂಪಸ್ ಇಂಟರ್‌ವ್ಯೂನಲ್ಲಿ ಆಯ್ಕೆಯಾದಳು.



ಸುಮಾರು ೧೦-೧೫ ವರ್ಷ ಗಳ ಹಿಂದೆ ೧೮೦೦೦೦ ರೂಪಾಯಿಗಳ ಸಂಬಳ ಅವಳಿಗೆ. ತಂದೆ-ತಾಯಿಯರು ಇದರಿಂದ ಆನಂದಿತರಾದರು. ಸಂಬಂಧಿಕರು, ಅಕ್ಕ-ಪಕ್ಕದ ಮನೆಯವರು ಅಶ್ವಿನಿಯನ್ನು ಹೊಗಳಿದರು. ಅವಳ ಸಾಧನೆಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಕೈ ತುಂಬಾ ಸಂಬಳ. ಮನೆಯಿಂದ ಕಛೇರಿಗೆ ಹೋಗಲು ಕಛೇರಿಯ ವಾಹನದ ವ್ಯವಸ್ಥೆ. ಕಛೇರಿಯಲ್ಲಿ ಹವಾ ನಿಯಂತ್ರಿತ ವ್ಯವಸ್ಥೆ. ಆಹಾ! ಬಹುತೇಕ ಯುವಕ-ಯುವತಿಯರ ಕನಸು ಇದೇ ಅಲ್ಲವೆ? ಅಶ್ವಿನಿ ಅಂಗಡಿ ನಿಜವಾಗಲೂ ಅದೃಷ್ಟವಂತೆ ಎಂದು ಜನರು ಮಾತನಾಡಿಕೊಳ್ಳುತ್ತಿರುವಷ್ಟರಲ್ಲೇ ಅವಳಿಗೆ ಕೆಲಸವು ಹಿಡಿಸಲಿಲ್ಲ. ಇದು ನನಗಲ್ಲ, ನನ್ನ ದಾರಿ ಬೇರೆ ಎಂದು ಅವಳ ಅಂತರಾತ್ಮ ಹೇಳಿತು. ಕೆಲವು ದಿವಸಗಳ ಆಲೋಚನೆಯಿಂದ 'ತಾನು ಸಮಾಜಕ್ಕೆ ಆಸರೆಯಾಗಬೇಕು. ನನ್ನಂತೆ ಹುಟ್ಟಿರುವ ಅಂಧ ಮಕ್ಕಳಿಗೆ ಆಶ್ರಯ ನೀಡಬೇಕು' ಎಂಬ ಮಹಾ ಕನಸು ಅವಳ ಮುಂದೆ ಬಂದಿತು. ಅದನ್ನು ನನಸಾಗಿಸಲು, ಯಾರು ಎಷ್ಟೇ ಹೇಳಿದರೂ ಕೆಲಸಕ್ಕೆ ರಾಜೀನಾಮೆ ನೀಡಿಯೇ ಬಿಟ್ಟಳು. ಅಷ್ಟೇ ಅಲ್ಲದೆ ಕೈಯಲ್ಲಿ ಬಿಡಿಗಾಸು ಇಲ್ಲದಿದ್ದರೂ, ಮೂರು-ನಾಲ್ಕು ಮಕ್ಕಳನ್ನು ಕರೆತಂದು ತಮ್ಮ ಮನೆಯಲ್ಲಿಯೆ ಆಶ್ರಯ ನೀಡಿದಳು. ಹಲವಾರು ಸಂಕಷ್ಟ, ಸವಾಲು, ಬಿನ್ನಾಣದ ಮಾತುಗಳನ್ನು ಅವಳು ಎದುರಿಸಬೇಕಾಯಿತು.

''ಯಾರು ಇತರರಿಗೋಸ್ಕರ ಜೀವಿಸುತ್ತಾರೋ, ಅವರೇ ನಿಜವಾಗಲೂ ಬದುಕಿದಂತೆ. ಉಳಿದವರು ಸತ್ತಂತೆ'' ಎಂಬ ಸ್ವಾಮಿ ವಿವೇಕಾನಂದರ ಮಾತುಗಳಿಂದ ಪ್ರೇರಣೆಗೊಂಡಿದ್ದ ಅಶ್ವಿನಿ ಅಂಗಡಿಯು ಬಂಡೆಯಂತೆ ತನ್ನ ಸಂಕಲ್ಪದಲ್ಲಿ ನಿಶ್ಚಲಳಾಗಿ ನಿಂತಳು. ಇಂದು ಅಶ್ವಿನಿ ಅಂಗಡಿಯು ಮೂವತ್ತು ಜನ ಮಕ್ಕಳ ತಾಯಿಯಾಗಿ ಆಶ್ರಯ ನೀಡಿದ್ದಾಳೆ. ಚೈತನ್ಯದ ಚಿಲುಮೆಯಾಗಿ

ದ್ದಾಳೆ.

ಮೈಸೂರಿನ ರಾಮಕೃಷ್ಣ ನೈತಿಕ ಶಿಕ್ಷಣ ಸಂಸ್ಥೆಯ (RIMSE) ಕಾರ್ಯಕ್ರಮಕ್ಕೆ ಬಂದಾಗ, ‘‘ನಾನು ಹೆಣ್ಣು ಹುಡುಗಿ, ನೇತ್ರ ಶಕ್ತಿ ಹೀನಳು ಎಂದು ಕನಿಕರದಿಂದ ನೋಡಬೇಡಿ, ಬದಲಿಗೆ ನಿಮ್ಮಂತೆ ನನ್ನನ್ನೂ ಕಾಣಿ’’ ಎಂದಳು. ಆತ್ಮವಿಶ್ವಾಸ, ಸಕಾರಾತ್ಮಕ ಮನೋಭಾವ, ಸೇವಾತತ್ಪರತೆ, ಹಿಮಾಲಯದಂತಹ ಛಲ ಅವಳಲ್ಲಿ ಎದ್ದು ಕಾಣುತ್ತಿತ್ತು. ಇಂದಿನ ಯುವ ಸಮಾಜ ಇಂತಹವರಿಂದ ಪ್ರೇರೇಪಿತರಾಗದಿದ್ದರೆ, ಇನ್ನು ಯಾರಿಂದ ಆಗಲು ಸಾಧ್ಯ ಅಲ್ಲವೆ !

### ‘‘ನನ್ನ ತಂದೆತಾಯಿಯರಲ್ಲಿ ಕಣ್ಣೀರು ತರಿಸಬೇಕು’’

ಕಲಬುರಗಿಯ ತರುಣ ಶಿವಾನಂದ ಸೇನಾವಾನೆ ಈ ಮೇಲಿನ ಮಾತನ್ನು ಹೇಳುತ್ತಾನೆ. ೨೦೧೬ರಲ್ಲಿ ಅಂದಿನ ಮುಖ್ಯಮಂತ್ರಿಗಳು ಕಲಬುರಗಿಯ ಕಾರ್ಯಕ್ರಮವೊಂದಕ್ಕೆ ಹೋಗಿದ್ದರು. ಅಲ್ಲಿ , ‘‘ಶಿವಾನಂದ ವೇದಿಕೆಯ ಮೇಲೆ ಬರಬೇಕು. ಮುಖ್ಯಮಂತ್ರಿ ಸಾಹೇಬರು ಅವನಿಗೆ ಸನ್ಮಾನ ಮಾಡಲಿದ್ದಾರೆ’’ ಎಂದು ಧ್ವನಿವರ್ಧಕದಲ್ಲಿ ಹೇಳಿದರು. ಅಲ್ಲಿದ್ದ ಜನರಿಗೆ, ಮಾಧ್ಯಮ ಮಿತ್ರರಿಗೆ ಆಶ್ಚರ್ಯ. ಅಷ್ಟಕ್ಕೂ ಈ ಶಿವಾನಂದನು ಏನು ಸಾಧನೆ ಮಾಡಿದ? ಪೋಲೀಯೋದಿಂದ ಅವನ ದೇಹದ ಬಲಭಾಗ ಸಂಪೂರ್ಣ ಸ್ವಾಧೀನಕಳೆದುಕೊಂಡಿದ್ದರಿಂದ, ಅವನು ವಿಶೇಷ ಚೇತನನಾಗಿದ್ದ. ಎಲ್ಲರಿಗೂ ಆಶ್ಚರ್ಯ. ಅವನು ೨೦೧೬ರಲ್ಲಿ ನೀಟ್ ಪರೀಕ್ಷೆಯಲ್ಲಿ ಅಂಗವಿಕಲರ ಕೋಟಾದಲ್ಲಿ ಇಡೀ ದೇಶಕ್ಕೆ ಪ್ರಥಮ ಸ್ಥಾನವನ್ನು ಪಡೆದಿದ್ದ. ಈ ಮಾತನ್ನು ಆಲಿಸಿದ ಜನನಾಯಕರಿಗೆ, ಸಭಿಕರಿಗೆ, ಮಾಧ್ಯಮದವರಿಗೆ ಅಚ್ಚರಿ ಉಂಟಾಯಿತು.

ಕಾರ್ಯಕ್ರಮ ಮುಗಿದ ಮೇಲೆ ಸಂದರ್ಶನಕ್ಕೆಂದು ಮಾಧ್ಯಮದವರು ಶಿವಾನಂದನನ್ನು ಸುತ್ತುವರಿದರು. ‘ನೀಟ್ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆಯಲು ಹೇಗೆ ಸಾಧ್ಯವಾಯಿತು?’ ಎಂದು ಪ್ರಶ್ನಿಸಿದರು.

‘‘ನಾನು ಮಧ್ಯಮವರ್ಗದಿಂದ ಬಂದಿರುವೆ. ನನ್ನ ತಂದೆ ಬಸ್ ಕಂಡಕ್ಟರ್, ತಾಯಿ ಗೃಹಿಣಿ. ನನ್ನ ಅಂಗವಿಕಲತೆ ಎಂದಿಗೂ ನನಗೆ ಅಡ್ಡಿ ಬರಲಿಲ್ಲ. ಏಕೆಂದರೆ ನನಗೆ ನನ್ನ ಜೀವನದಲ್ಲಿ ಎರಡು ಆಸೆಗಳಿದ್ದವು. ಒಂದು ನಾನು ಚೆನ್ನಾಗಿ ಓದಿ, ಜ್ಞಾನವಂತನಾಗಬೇಕು. ಎರಡು, ನನ್ನ ತಂದೆತಾಯಿಯರ ಕಣ್ಣಲ್ಲಿ ನೀರನ್ನು ತರಿಸಬೇಕು ಎಂದು. ನನಗೆ ಜ್ಞಾನದ ಹಂಬಲವಿದ್ದುದರಿಂದ ‘ಕಷ್ಟಪಟ್ಟು’ ಓದದೆ, ‘ಇಷ್ಟಪಟ್ಟು’ ಓದಿದ್ದರಿಂದ, ನೀಟ್ ಪರೀಕ್ಷೆಯಲ್ಲಿ ಪ್ರಥಮಸ್ಥಾನವನ್ನು ಗಳಿಸಿಕೊಳ್ಳುವುದರಲ್ಲಿ ಕಷ್ಟವಾಗಲಿಲ್ಲ. ಎರಡನೆಯದು, ನನ್ನ ತಂದೆತಾಯಿ ಕಷ್ಟಪಟ್ಟು ಹಣ ಸಂಪಾದನೆ ಮಾಡಿ, ನನ್ನನ್ನು ಸಾಕುತ್ತಿದ್ದಾರೆ. ಆದ್ದರಿಂದ ಅವರ ಕಣ್ಣುಗಳಲ್ಲಿ ಸಂತೋಷದ ಕಣ್ಣೀರನ್ನು ತರಿಸಬೇಕು ಎಂದು ಬಯಸಿದ್ದೆ. ಇಂದು ಅದು ಸಾಧ್ಯವಾಗಿದೆ’’ ಎಂದನು. ಈ ಮಾತುಗಳನ್ನು ಕೇಳಿದ ಹಲವರಲ್ಲಿ ಕಣ್ಣೀರು ಬಂದಿತ್ತು.



ಶಿವಾನಂದರ ತಂದೆ ತನ್ನ ಸಂತೋಷವನ್ನು ವ್ಯಕ್ತಪಡಿಸುತ್ತಾ ತಮ್ಮ ಅಸ ಹಾಯ ಕತೆಯನ್ನು ಹೇಳಿಕೊಂಡರು. ‘‘ನಾವು ಬಡವರಿದ್ದೇವೆ. ನನ್ನ ಮಗ AIIMS , ನವದೆಹಲಿಯಲ್ಲಿ ಓದಬೇಕು ಎಂದಿ ದ್ದಾನೆ. ಆದರೆ ಶುಲ್ಕ ಕಟ್ಟಲು ನನಗೆ ಸಾಧ್ಯವಾಗುತ್ತಿಲ್ಲ. ಯಾರಾ ದರೂ ದಾನಿಗಳು ಹಣದ ಸಹಾಯವನ್ನು ಮಾಡಿದರೆ, ಅವ ನನ್ನು ಓದಿಸುತ್ತೇನೆ. ಇಲ್ಲವೆಂದರೆ ಆಗುವುದಿಲ್ಲ’’ ಎಂದಾಗ, ಜನರಿಗೆ ಗೊತ್ತಿಲ್ಲದೆ ಅವರ ಕಣ್ಣುಗಳು ತೇವವಾಗಿದ್ದವು.

ಶಿವಾನಂದನ ಬಡತನ, ಅಂಗವಿಕಲತೆ ಮೊದಲಾದ ಯಾವುದೇ ಸಮಸ್ಯೆಗಳು ಅವನ ಸಾಧನೆಗೆ ಅಡ್ಡಿ ಬರಲಿಲ್ಲ.

‘‘ನಿಮ್ಮಲ್ಲಿ ನಿಮಗೆ ಶ್ರದ್ಧೆಯಿರಲಿ. ಸಕಲ ಶಕ್ತಿಯೂ ನಿಮ್ಮಲ್ಲೇ ಅಡಗಿದೆ. ಇದನ್ನರಿತು ನಿಮ್ಮ ವ್ಯಕ್ತಿತ್ವದಲ್ಲಿ ಆ ಶಕ್ತಿಯನ್ನು ಪ್ರಕಟಪಡಿಸಿ’’ ಎಂದು ಸ್ವಾಮಿ ವಿವೇಕಾನಂದರು ಹೇಳಿದ ಮಾತನ್ನು ನಾವು ಇಲ್ಲಿ ಸ್ಮರಿಸಬಹುದು.

### ೧೬ನೇ ವರ್ಷದ ಯುವ ಮುಖ್ಯೋಪಾಧ್ಯಾಯ !

೯ ವರ್ಷದ ಬಾಲಕ, ಅಂದರೆ ಸುಮಾರು ೩ನೇ ತರಗತಿಯಲ್ಲಿ ಓದುತ್ತಿದ್ದ ವಿದ್ಯಾರ್ಥಿಯು ಸ್ವಾಮಿ ವಿವೇಕಾನಂದರ ಸಂದೇಶದಿಂದ ಸ್ಫೂರ್ತಿಗೊಂಡ. ಅನೇಕರಲ್ಲಿ ಅದು ಕೆಲವು ದಿವಸಗಳಲ್ಲೇ ಬತ್ತಿಹೋಗುವವಂತೆ, ಅವನಲ್ಲಿ ಬತ್ತಿ ಹೋಗಲಿಲ್ಲ. ಆ ಸ್ಫೂರ್ತಿಯು ಅವನ ಅಂತರಂಗದಲ್ಲಿ ಶಾಶ್ವತ ಸ್ಥಾನವನ್ನು ಪಡೆಯಿತು. ಅವನ ಹೃದಯ ಬಡವರಿಗೆ, ದೀನರಿಗೆ ಏನಾದರೂ ಸೇವೆ ಮಾಡಬೇಕೆಂದು ತುಡಿಯಿತು. ಅವನು ಹಳ್ಳಿಯಲ್ಲಿ ಹುಟ್ಟಿದ ಬಡಹುಡುಗ. ಅಷ್ಟು ಚಿಕ್ಕ ಹುಡುಗ ಏನು ಸೇವೆ ಮಾಡಬಲ್ಲ ಎಂದು ನಮಗೆ ಅನ್ನಿಸಬಹುದು. ಆದರೆ ಅವನು ಸೇವಾಕಾರ್ಯವನ್ನು ಪ್ರಾರಂಭಿಸಿಯೇ ಬಿಟ್ಟ — ಅವನಿಗಿಂತಲೂ ಚಿಕ್ಕ ಹುಡುಗರಿಗೆ ಪಾಠ ಹೇಳಿಕೊಡುವ ಮೂಲಕ. ಜಾಗತಿಕ ಮಟ್ಟ ದಲ್ಲೇ ೧೬ನೇ ವರ್ಷದ ಯುವ ಮುಖ್ಯೋ ಪಾಧ್ಯಾಯ ಎಂಬ ಬಿರುದಿಗೆ, ಕೀರ್ತಿಗೆ ಪಾತ್ರನಾದ. ಅವನಿಗೆ ನಾ ಮುಂದು, ತಾ ಮುಂದು ಎಂಬಂತೆ ಹತ್ತಾರು ರಾಷ್ಟ್ರೀಯ -ಅಂತರ ರಾಷ್ಟ್ರೀಯ ಪ್ರಶಸ್ತಿಗಳು ಬಂದವು. ಆ



ಹುಡುಗನೇ ಬಾಬರ್ ಅಲಿ. ಪಶ್ಚಿಮ ಬಂಗಾಳದ ಮುರ್ಷಿದಾಬಾದ್‌ನಲ್ಲಿ ಜನಿಸಿದ ಅವನು ಸ್ವಾಮಿ ವಿವೇಕಾನಂದರಿಂದ ಸ್ಫೂರ್ತಿ ಪಡೆದು, ಈಗ ೮೦೦ ಜನ ಬಡ ಮಕ್ಕಳಿಗೆ ಉಚಿತ ಆವಾಸಿ ಶಿಕ್ಷಣವನ್ನು ನೀಡುತ್ತಿದ್ದಾನೆ. ಹಳ್ಳಿಯ ಬಡಮಕ್ಕಳಿಗೆ ಶಾಲೆಯನ್ನು ತೆರೆದು, ವಿದ್ಯಾಸೇವೆಯನ್ನು ನೀಡಿ, ದಾರಿದೀಪವಾಗಿದ್ದಾನೆ. ಮೊನ್ನೆಯಷ್ಟೇ ಅವನು ತನ್ನ ಸ್ನಾತಕೋತ್ತರ ವಿದ್ಯಾಭ್ಯಾಸವನ್ನು ಮುಗಿಸಿರುವುದು ಆಶ್ಚರ್ಯದ ಸಂಗತಿ.

''ಸ್ವಾಮಿ ವಿವೇಕಾನಂದರ ಸಂದೇಶವು ಅಮೃತದ ಮಡು. ಮಿಂದರೆ ಪುನೀತರಾಗುತ್ತೇವೆ; ಹೊಕ್ಕರೆ ಪ್ರಬುದ್ಧರಾಗುತ್ತೇವೆ'' ಎಂಬ ರಾಷ್ಟ್ರಕವಿ ಕುವೆಂಪು ಅವರ ಅನುಭವದ ಮಾತುಗಳಿಗೆ ಇವನು ನಿದರ್ಶನವೇ ಸರಿ.

''ಮನುಷ್ಯರು! ಮನುಷ್ಯರು! ನಮಗಿಂದು ಬೇಕಾಗಿರುವುದು ಇವರು! ಉಳಿದುವೆಲ್ಲ ತಾವಾಗಿಯೇ ಬರುವುವು. ಆದರೆ, ಒಳಗೂ ಹೊರಗೂ ಪ್ರಾಮಾಣಿಕರಾದ, ಶಕ್ತಿಶಾಲಿಗಳಾದ, ಉತ್ಸಾಹಿಗಳಾದ, ಶ್ರದ್ಧಾವಂತರಾದ, ನಂಬಿಕೆಗೆ ಅರ್ಹರಾದ ಯುವಜನಾಂಗ ಬೇಕು. ಅಂಥಹ ನೂರು ಜನ ಸಿಕ್ಕಿದರೆ ಪ್ರಪಂಚದಲ್ಲೊಂದು ಉತ್ಕ್ರಾಂತಿಯನ್ನೇ ಮಾಡಿಬಿಡಬಹುದು'' — ಸ್ವಾಮಿ ವಿವೇಕಾನಂದರು.

ಬನ್ನಿ, ಸ್ವಾಮಿ ವಿವೇಕಾನಂದರು ಬಯಸಿದ ಆ ನೂರು ಯುವಜನರಲ್ಲಿ ನಾವೂ ಒಬ್ಬರಾಗೋಣ!

**''ನಾನು ಜನರಿಗೆ ಸ್ಫೂರ್ತಿ ಕೇಂದ್ರವಾಗಬೇಕು; ತ್ರಿವರ್ಣ ಧ್ವಜವು ಎತ್ತರದಲ್ಲಿ ಹಾರಬೇಕು''**

ಕುವರಿ ಪಾಲಕ್ ಕೊಹ್ಲಿಯ ಹೆಸರು ಇಂದು ಭಾರತೀಯರಿಗೆ ಯಾರಿಗೆ ಗೊತ್ತಿಲ್ಲ ಹೇಳಿ? ೨೦೨೧ರ ಟೋಕಿಯೋದಲ್ಲಿ ನಡೆದ ಪ್ಯಾರಾ ಒಲಂಪಿಕ್ಸ್‌ನಲ್ಲಿ ಬ್ಯಾಡ್‌ಮಿಂಟನ್ ಸ್ಪರ್ಧೆಯಲ್ಲಿ ಭಾಗವಹಿಸಲು ಆಯ್ಕೆಯಾದ ಪ್ರಥಮ ಮಹಿಳೆ. ಬಾಲ್ಯದಿಂದ ಅವಳ ಒಂದು ಕೈ ಬೆಳೆಯದೆ ಅಂಗವಿಕಲಳಾಗಿದ್ದಳೆ. ಅದನ್ನು ಜನರು ಕಂಡಾಗಲೆಲ್ಲಾ 'ಅಯ್ಯೋ' ಎನ್ನುತ್ತಿದ್ದರಂತೆ. ಅದು ಅವಳ ಮನಸ್ಸಿಗೆ ನೋವನ್ನು ತರುತ್ತಿತ್ತು. ಅದು ಅವಳಿಗೆ ಕೊರತೆಯಾಗದೆ, ಶಕ್ತಿಯಾಯಿತು. 'ಜನರಿಗೆ ಭಗವಂತನು ಎರಡು ಕೈಯನ್ನು ಏಕೆ ಕೊಟ್ಟ? ಸಾಧನೆ ಮಾಡಲೆಂದು. ಅದನ್ನೇ ನಾನು ಒಂದು ಕೈಯಿಂದಲೇ ಮಾಡಿ ತೋರಿಸುತ್ತೇನೆ. ನನ್ನಂತಹ ಅನೇಕರಿಗೆ, ಆರೋಗ್ಯವಂತ ಜನರಿಗೂ ನಾನು ಸ್ಫೂರ್ತಿಯ ಕೇಂದ್ರವಾಗುತ್ತೇನೆ. ವಿಶ್ವಮಟ್ಟದಲ್ಲಿ ಸಾಧನೆ ಮಾಡಿ, ನನ್ನ ದೇಶದ ತ್ರಿವರ್ಣಧ್ವಜವನ್ನು ಎತ್ತರದಲ್ಲಿ ಹಾರುವಂತೆ ಮಾಡುತ್ತೇನೆ' ಎಂದು ಸಂಕಲ್ಪ ಮಾಡಿದಳು.

ಅದರಂತೆ ಬ್ಯಾಡ್‌ಮಿಂಟನ್ ಆಟದಲ್ಲಿ ತನ್ನ ಸಾಧನೆಯನ್ನು ಪ್ರಾರಂಭಿಸಿದಳು. ಅನೇಕರು ಅವಳ ಹುಚ್ಚನ್ನು ನೋಡಿ ನಕ್ಕರು. ಇನ್ನು ಕೆಲವರು, ''ನೀನು ಚೆನ್ನಾಗಿ ಓದಿ, ಒಳ್ಳೆಯ ಕೆಲಸವನ್ನು ಗಳಿಸಿಕೊ. ಅದರಿಂದ ನಿನ್ನ ಜೀವನ ಸುರಕ್ಷಿತವಾಗಿರುತ್ತದೆ. ಇಲ್ಲ ಎಂದರೆ ನಿನ್ನನ್ನು ಯಾರು ಮದುವೆಯಾಗುತ್ತಾರೆ?'' ಎಂದು ಬುದ್ಧಿವಾದವನ್ನು ಹೇಳಿದರು.



ಆದರೆ ಯಾವುದಕ್ಕೂ ಜಗ್ಗದೆ ಕುವರಿ ಪಾಲಕ್ ಕೊಹ್ಲಿ ತನ್ನ ಸಾಧನೆಯನ್ನು ಮುಂದುವರೆಸಿದಳು. ಸಾಮಾನ್ಯ ಆಟಗಾರರಿಗೆ ಬೇಕಾಗುವ ಸಮಯಕ್ಕಿಂತ ಎರಡು ಪಟ್ಟು ಹೆಚ್ಚು ಸಮಯ ಇವಳಿಗೆ ಬೇಕಾಗುತ್ತಿತ್ತು. ಎಷ್ಟೋ ಬಾರಿ, ಅಭ್ಯಾಸದಿಂದ ಸಮಾರಂಭ, ಹಬ್ಬಗಳಲ್ಲಿ ಪಾಲ್ಗೊಳ್ಳಲು ಆಗುತ್ತಿರಲಿಲ್ಲ. ಆದರೆ ಸತತ ಪರಿಶ್ರಮ, ಆತ್ಮವಿಶ್ವಾಸ, ಉತ್ಸಾಹಗಳಿಂದ ಶ್ರಮವಹಿಸಿದ ೧೯ ವರ್ಷದ ಕುವರಿ ಪ್ಯಾರಾ ಒಲಂಪಿಕ್ಸ್‌ನಲ್ಲಿ ಮಹಿಳೆಯರ ಸಿಂಗಲ್ಸ್ ಮತ್ತು ಡಬಲ್ಸ್ ಬ್ಯಾಡ್‌ಮಿಂಟನ್ ಪಂದ್ಯದಲ್ಲಿ ಆಡುವುದಕ್ಕೆ ಆಯ್ಕೆಯಾದ ಪ್ರಥಮ ಮಹಿಳೆ ಎಂಬ ಕೀರ್ತಿಗೆ ಪಾತ್ರಳಾಗಿದ್ದಾಳೆ. ದುಬೈನಲ್ಲಿ ನಡೆದ ೨೦೨೧ರ ವಿಶ್ವಮಟ್ಟದ ಪ್ಯಾರಾ ಬ್ಯಾಡ್‌ಮಿಂಟನ್ ಪಂದ್ಯದಲ್ಲಿ ಇವಳು ಭಾಗವಹಿಸಿದ್ದಳು. ೨೦೧೯ರಲ್ಲಿ ಜಪಾನ್ ಮತ್ತು ಉಗಾಂಡದಲ್ಲಿ ನಡೆದ ಸ್ಪರ್ಧೆಗಳಲ್ಲೂ ಭಾರತದಿಂದ ಭಾಗವಹಿಸಿದ ಕೊಹ್ಲಿ, ಅನೇಕ ಪ್ರಶಸ್ತಿಗಳನ್ನು ಪಡೆದುಕೊಂಡಿರುತ್ತಾಳೆ.

## 'ಎಲ್ಲವೂ ನೀನೇ'

**ತದೇವಾಗ್ನಿಸ್ತದಾದಿತ್ಯಸ್ತದ್ವಾಯುಸ್ತದು ಚಂದ್ರಮಾಃ।**
**ತದೇವ ಶುಕ್ರಂ ತದ್ಬ್ರಹ್ಮ ತದಾಪಸ್ತತ್ ಪ್ರಜಾಪತಿಃ ॥**

ಆ ಆತ್ಮತತ್ತ್ವವೇ ಅಗ್ನಿ, ಆದಿತ್ಯ, ವಾಯು, ಚಂದ್ರ, ನಕ್ಷತ್ರಗಳು. ಅದೇ ಹಿರಣ್ಯಗರ್ಭ ನೀರು, ವಿರಾಟ್ಪುರುಷ ಆಗಿರುತ್ತದೆ.

**ತ್ವಂ ಸ್ತ್ರೀ ಪುಮಾನಸಿ ತ್ವಂ**
**ಕುಮಾರ ಉತ ವಾ ಕುಮಾರೀ।**
**ತ್ವಂ ಜೀರ್ಣೋ ದಂಡೇನ ವಂಚಸಿ ತ್ವಂ**
**ಜಾತೋ ಭವಸಿ ವಿಶ್ವತೋಮುಖಃ ॥**

ನೀನು ಸ್ತ್ರೀ, ಪುರುಷ, ಕುಮಾರ ಮತ್ತು ಕುಮಾರಿ. ಮುಪ್ಪನ್ನು ಪಡೆದು ಕೋಲಿನಿಂದ ತತ್ತರಿಸುತ್ತಿರುವ ಮುದುಕನೂ ನೀನೇ. ಪ್ರಪಂಚರೂಪದಿಂದ ಉತ್ಪನ್ನನಾಗಿ ವಿಶ್ವತೋಮುಖನಾಗಿರುವವನೂ ನೀನೇ.

— ಶ್ವೇತಾಶ್ವತರೋಪನಿಷತ್, ೪.೨-೩